ಮಿಂಚುತ್ತ ಹರಿವ ನೀರನ್ನೇ ನೋಡುತ್ತಿದ್ದ. ನಂತರ ನೀರಲ್ಲಿ ಇಳಿದು ಮುಖ ಕೈಕಾಲುಗಳನ್ನು ತೊಳೆದುಕೊಂಡು, ನಾಲ್ಕೈದು ಬೊಗಸೆ ಕುಡಿದು ಹಿಂತಿರುಗಿ ನಡೆದ. ಅಮ್ಮ ಅವನ ಮುಖವನ್ನು ನೋಡಿಯೇ ಎಲ್ಲವನ್ನೂ ಅರ್ಥಮಾಡಿಕೊಂಡಳು. ನಿರಾಸೆಯಿಂದ ಅವಳ ಕಣ್ಣುಗಳು ಬತ್ತಿಹೋದವು.

ಮನೆಯ ಪಕ್ಕದಲ್ಲಿರುವ ಪುಸ್ತಕಾಲಯದಲ್ಲಿಯೇ ಅವನು ದಿನವೆಲ್ಲ ಇರಲು ತೊಡಗಿದ. ಅಲ್ಲಿಗೆ ಬರುವ ಎಲ್ಲಾ ಸುದ್ದಿಪತ್ರಿಕೆಗಳನ್ನೂ, ವಾರ, ಮಾಸಿಕ ಪತ್ರಿಕೆಗಳನ್ನೂ ಒಂದನ್ನೂ ಬಿಡದೆ ಓದಿದ. ಅಷ್ಟುಮಾತ್ರವಲ್ಲ ಯಾರು ಹೇಳದಲೇ ಪುಸ್ತಕಾಲಯವನ್ನು ದಿನವೂ ಗುಡಿಸಿ, ಕಿಟಕಿಯ ಕಂಬಿಗಳಲ್ಲಿ ಅಂಟಿಕೊಂಡಿರುವ ಕೊಳೆಯನ್ನು ಒರಸುವುದನ್ನೂ, ಕೊಡದಲ್ಲಿ ನೀರು ತುಂಬಿಡುವುದನ್ನೂ ತನ್ನ ಕೆಲಸವಾಗಿ ತಿಳಿದು ಮಾಡಿದ. ಪುಸ್ತಕಾಲಯದ ಕೆಲಸ ಮಾಡುವವರು ಅವನ ಮೇಲೆ ಬಹಳ ಪ್ರೀತಿ ತೋರಿಸಿದರು. ಅವನು ಸದಸ್ಯನಲ್ಲದಿದ್ದರೂ ಹಲವು ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಓದಲು ಅನುಮತಿಸಿದರು. ಯಾವಾಗಲಾದರೂ ಕೆಲವೊಮ್ಮೆ ಸಂಜೆಯ ಸಮಯದಲ್ಲಿ ಪುಸ್ತಕಾಲಯಕ್ಕೆ ಬೀಗಹಾಕಿ ಹೋಗುವಾಗ ಅವರು ಅವನಿಗೆ ನಾಲ್ಕಾಣೆಯೋ ಎಂಟಾಣೆಯೋ ಕೊಟ್ಟು ಹೋಗುವರು. ಆ ಕಾಸಿನಲ್ಲಿ ಹುರಿಗಡಲೆಯನ್ನೂ ಬೆಲ್ಲವನ್ನೂ ಕೊಂಡುತಂದು ತಮ್ಮ ತಂಗಿಯರೊಂದಿಗೆ ಹಂಚಿ ತಿನ್ನುತ್ತಿದ್ದ.

ಅಬ್ದುಲ್ಲಾ ಮಾವ ದಿಢೀರ್ ದಿಢೀರೆಂದು ಬಂದು ಲಾಸ್ಪೇಟೆ, ಕರುವಡಿಕುಪ್ಪಮ್, ತೇಂಗಾತಿಟ್ಟು, ತವಳಕ್ಕುಪ್ಪಂ ಎಂದು ಅಪ್ಪ ಹೋಗುವ ಜಾಗಗಳ ಬಗ್ಗೆ ಸುದ್ದಿ ಹೇಳಿಹೋಗುವುದೂ, ಮಾರನೆಯ ದಿನವೇ ನಂಬಿಕೆಯೊಂದಿಗೆ ಅವನು ನಡೆದುಹೋಗಿ ನೋಡಿಕೊಂಡು ಬರುವುದು ಅಭ್ಯಾಸವಾಗಿ ಹೋಯಿತು. ಯಾವ ಜಾಗದಲ್ಲೂ ಒಂದು ಸಣ್ಣ ಸುಳಿವೂ ಸಹ ಸಿಗಲಿಲ್ಲ.

ಪರೀಕ್ಷೆಯ ರಿಸಲ್ಟ್ ಬರಲು ಇನ್ನು ಎರಡು ದಿನಗಳಿದ್ದವು. ಅವನ ಮನಸ್ಸು ಆತಂಕದಿಂದ ಚಡಪಡಿಸುತ್ತಿತ್ತು. ಅಬ್ದುಲ್ಲಾ ಮಾವ ಮನೆಗೆ ಬಂದು ಕಾಳಪಟ್ಟೆಯಿಂದ ಒಂದು ಭರವಸೆಯಾದ ಸುದ್ದಿ ಸಿಕ್ಕಿರುವುದಾಗಿ ಹೇಳಿದರು. ಅಯ್ಯನಾರ್ ದೇವಸ್ಥಾನದ ಒಂದು ಮಾಂಸದ ಅಂಗಡಿಯಲ್ಲಿ ವಿಚಾರಿಸಲು ಹೇಳಿದರು.

ಮಾರನೆಯ ದಿನ ಬೆಳಗ್ಗೆಯೇ ಮುತ್ತುಸಾಮಿ ಹೊರಟ. ಆ ಜಾಗಕ್ಕೆ ಹೋಗಲು ಮೂರುಗಂಟೆಗಳಿಗಿಂತ ಹೆಚ್ಚಾಗಿ ನಡೆಯಬೇಕಾಗಿತ್ತು. ಮಾಂಸದ ಅಂಗಡಿಯಲ್ಲಿ ವಿಚಾರಿಸಿದಾಗ 'ರಾಮಲಿಂಗಂ ಮಗನಾ ನೀನು?' ಎಂದು ಅವರು ಕೇಳಿದರು. ಅವನು ಮೆಲ್ಲಗೆ ತಲೆಯಾಡಿಸಿದ. ಬಟ್ಟನ್ನು ತಕ್ಕಡಿಯಲ್ಲಿಟ್ಟು ಅವನ ಹತ್ತಿರಕ್ಕೆ ಬಂದರು. 'ಎರಡು ತಿಂಗಳಿಂದ ಆಸಾಮಿ ಬರಲೇ ಇಲ್ಲವಲ್ಲ ತಮ್ಮ. ಮೈಗೆ ಹುಷಾರಿಲ್ದಿರಬಹುದು ಅಂತ ಅಂದ್ಕೊಂಡೇ. ನೀನು ಹೀಗೆ ದಡಾರ್ ಅಂತ ಬಂದು ನಿಂತಿರೋದನ್ನ ನೋಡಿದ್ರೆ ನನಗೆ ಭಯವಾಗಿದೆಯಲ್ಲ' ಎಂದು ಹೇಳುತ್ತಲೇ ಅಂಗಡಿಯ ಮೂಲೆಯಲ್ಲಿ ಗೋಡೆಗೆ ಒರಗಿಸಿಟ್ಟಿದ್ದ ಒಂದು ಸೈಕಲ್ ಬಳಿ ಹೋಗಿ ನಿಟ್ಟುಸಿರುಬಿಡುತ್ತ ನಿಂತರು. ಕೆಲವು ಕ್ಷಣಗಳ ನಂತರವೇ ಅವನು ಆ ಸೈಕಲನ್ನು ಗಮನಿಸಿದ. ಅದು ಅವನ ಅಪ್ಪನ ಸೈಕಲ್. 'ನಾಳೆ ಬಂದು ತೆಕೊಂಡು ಹೋಗ್ತೀನಿ ಅಂತ ಅವನೇ ಇಲ್ಲಿ ನಿಲ್ಲಿಸಿಬಿಟ್ಟು ಹೋದ' ಎಂದು ಹೇಳುತ್ತಾ ಬಂದವರು ನಾಲಿಗೆಯನ್ನು ಲೊಚಗುಟ್ಟುತ್ತಾ, ಕೊನೆಗೆ ಹೀಗೆ ಮಾಡ್ತಾನೆ ಅಂತ ಗೊತ್ತಾಗದೆ ಹೋಯ್ತಲ್ಲ' ಎಂದು ಹೇಳಿ ನಿಲ್ಲಿಸಿದರು. ಮತ್ತೆ